15

# ಅಪವಾದ ಬರುವಾಗ ನೀತಿಯ ಕಾರ್ಯವನ್ನೇ ಮಾಡಬೇಕು (5:7-12)

ನನ್ನ ಸುತ್ತಲಿರುವವರು ಬಹುಶಃ ನನ್ನನ್ನು ಗಮನಿಸಿರುತ್ತಾರೆ: ನನ್ನನ್ನು ಯಾರು ಟೀಕಿಸಬಾರದು! ನಾನು ತಪ್ಪು ಮಾಡಿದ್ದೇನೆಂಬುದಾಗಿ ಯಾರು ಕೇಳಬಾರದು, ಕೆಲವು ಸಂಗತಿಗಳಲ್ಲಿ ಸೋತಿದ್ದೇನೆ, ನನ್ನ ಪ್ರಯತ್ನಗಳಲ್ಲಿ ಸೋತಿದ್ದೇನೆ ಅಥವಾ ಜನರು ಬದಿಯಲ್ಲಿ ನಿಂತು ಪಿಸುಗುಟ್ಟಿ ಯಥಾರ್ಥವಾದ ಟೀಕೆಯನ್ನು ಒಪ್ಪಿಕೊಳ್ಳಬಹುದೆಂದು ಹೇಳುತ್ತಾರೆ. ಅದನ್ನು ನಾನು ಒಪ್ಪಿಕೊಂಡರು, ಅದು ನನಗೆ ಇಷ್ಟವಾಗದ ಸಂಗತಿ! ಅದು ಒಳ್ಳೆಯ ಟೀಕೆ ಅಥವಾ ಕೆಟ್ಟದ್ದಾಗಿರಬಹುದು, ಆದರೂ ಅದು ಟೀಕೆಯೇ. ಆ ಟೀಕೆಗೆ ನಾನು ಒಳಪಡದೆ ಹೋದರೂ, ಅದು ನನ್ನಲ್ಲಿ ಕೋಪವನ್ನೆಬ್ಬಿಸುತ್ತದೆ. ಹಾ! ಅದು ನನ್ನನ್ನು ನಿಜವಾಗಿಯೂ ರೇಗಿಸುತ್ತದೆ.

ಈ ವಿಧವಾದಂತ ಒಡಕಿನ ಹೆಮ್ಮೆಯನ್ನು ನಾವೆಲ್ಲರೂ ಅನುಭವಿಸುತ್ತೇವೆ. ಹಳೆಯ ವಾಖ್ಯಾನದಂತೆ, "ನಾನು ಜೂಜಾಡುವವನಾಗಿದ್ದರೆ, ಆ ಅನುಭವವು ನನಗೊಬ್ಬನಿಗೆ ಆಗಿರುವದಿಲ್ಲ." ಈ ವಿಧವಾದ ಉದ್ವೇಗಕ್ಕೂ ಮತ್ತು ವೇದನೆಗೂ ಸಿಲುಕಿಕೊಂಡು ನೋವನ್ನು ಅನುಭವಿಸುತ್ತೇವೆ. ಇವುಗಳ ನಿಮಿತ್ತ ನೂರಾರು ಹಾಡುಗಳು ಚಲನ ಚಿತ್ರಗಳು, ದೂರದರ್ಶನದ ಕಾರ್ಯಕ್ರಮಗಳು ಮತ್ತು ಅನೇಕ ಪುಸ್ತಕಗಳು ಉಂಟಾಗಿವೆ.

ನಮ್ಮೆಲ್ಲಾ ವೇದನೆಗಳು ಟೀಕೆಯ ನಿಮಿತ್ತವಾಗಿಯೇ ಉಂಟಾಗಿರುವದಿಲ್ಲ; ಅವುಗಳು ಅನೇಕ ಪರಿಸ್ಥಿತಿಗಳಲ್ಲಿ ಉಂಟಾಗುತ್ತವೆ. ಕೆಲಸ ಮಾಡುವಲ್ಲಿ ಉಂಟಾಗುವ, ಅಸಹನೆಯಿಂದ, ಕೌಟುಂಬಿಕ ಸಮಸ್ಯೆಗಳಿಂದ (ದಾಂಪತ್ಯ ಅಥವಾ ತಂದೆ ತಾಯಿಗಳ ಮೂಲಕ), ಅಥವಾ ಸ್ನೇಹಿತರ ಮೋಸದಿಂದಲೂ ಉಂಟಾಗಬಹುದು. ಯಾಕೋಬ 5ರ ಹಿನ್ನೆಲೆಯಲ್ಲಿ, ಧನಿಕರಿಂದ ಉಂಟಾಗುವ ನಿಂದನೆ ಅವರಿಂದುಟಾಗುವ ಕೀಳಾದ ಮನೋಭಾವನೆಯನ್ನು ಕ್ರೈಸ್ತರು ಸಹಿಸಿಕೊಳ್ಳುವಂತದ್ದು ಸಹಜವಾಗಿತ್ತು. ಧನಿಕರ ಪಾಪದ ವಿಷಯವಾಗಿ ಯೋಚಿಸುವಾಗ (ಅನ್ಯಾಯವಾಗಿ ದ್ರವ್ಯವನ್ನು ಸಂಪಾದಿಸಿ ಕೂಲಿಯವರ ಕೂಲಿಯನ್ನು ನೀಡದೇ ಮುಗ್ಧರನ್ನು ತೀರ್ಪುಮಾಡಿ ಮತ್ತು ಕೊಂದುಹಾಕಿದ್ದೀರಿ, 5:1-6 ವಚನ), ಇದರ ಮೂಲಕವಾಗಿ ಅವರಲ್ಲಿ ಉಂಟಾಗಿದ್ದಂತ ಮುಯ್ಯಿ ತೀರಿಸಿಕೊಳ್ಳುವ ಸ್ವಭಾವವನ್ನು ತಿಳುಕೊಳ್ಳುವದು ಅಸಾಧ್ಯವಲ್ಲ. 6:10 ಪ್ರಕಟನೆಯಲ್ಲಿರುವ ಸಿಂಹಾಸನದ ಕೆಳಗಿನಿಂದ ಹೊರಟ ದೇವ ಜನರ ಪ್ರಾರ್ಥನೆಯಂತೆ ಈ ಕ್ರೈಸ್ತರು ಸಹ ಪ್ರಾರ್ಥಿಸಿದ್ದರು: "ಒಡೆಯನೇ ಪರಿಶುದ್ಧನು. ಸತ್ಯವಂತನು, ಆಗಿರುವಾತನೇ, ಭೂನಿವಾಸಿಗಳು ನಮ್ಮನ್ನು ಕೊಂದದ್ದಕ್ಕಾಗಿ ನೀನು ಎಷ್ಟು ಕಾಲದವರೆಗೂ ನ್ಯಾಯ ವಿಚಾರಿಸದೆಯೂ ಪ್ರತಿದಂಡನೆ ಮಾಡದೆಯೂ ಇರುವಿ?" ಎಂದು ಮಹಾಶಬ್ದದಿಂದ ಕೂಗಿದರು.

ಆದರೆ ದೇವರು ಕಹಿಭಾವನೆಗಿಂತಲೂ, ಮುಯ್ಯಿಗೆ ಮುಯ್ಯಿ ತೀರಿಸುವ ವಿಷಯದಲ್ಲಿಯೂ, ವಿಶೇಷವಾದ ಯೋಜನೆಯನ್ನು ಹೊಂದಿರುತ್ತಾನೆ. ಪ್ರಪಂಚವು ಮೋಸಪಡಿಸುವಾಗ ನಮ್ಮಲ್ಲಿರುವಂತ ನಂಬಿಕೆಯು ತೋರಿಸುವ ವ್ಯತಿರಿಕ್ತವಾದ ಕ್ರಿಯೆಯ ಬಗ್ಗೆ ಯಾಕೋಬನು ತಿಳಿಸುತ್ತಾನೆ. ನಾಲ್ಕು ಅಪ್ಪಣೆಯ ಮೂಲಕ ಯಾಕೋಬನು ಮಾರ್ಗದರ್ಶನವನ್ನು ನೀಡುತ್ತಿದ್ದಾನೆ. ಮೊದಲೆರಡು ಸಕಾರಾತ್ಮಕವಾದವು, ಉಳಿದೆರಡು ನಕಾರಾತ್ಮಕವಾದವು.

## “ಧೀರ್ಘಶಾಂತರಾಗಿರಿ” (5:7)

ವಚನ 7ರಲ್ಲಿ ಮೊದಲನೆಯ ಆಜ್ಞೆಯನ್ನು ನೋಡುತ್ತೇವೆ: “ಸಹೋದರರೇ ಕರ್ತನು ಪ್ರತ್ಯಕ್ಷನಾಗುವ ತನಕ ಧೀರ್ಘಶಾಂತಿಯಿಂದಿರಿ, ವ್ಯವಸಾಯಗಾರನನ್ನು ನೋಡಿರಿ; ಅವನು ಭೂಮಿಯ ಬೆಲೆಯುಳ್ಳ ಫಲಕ್ಕಾಗಿ ಕಾದಿದ್ದು ಮುಂಗಾರು ಹಿಂಗಾರು ಮಳೆಗಳು ಬರುವ ತನಕ ದೀರ್ಘಶಾಂತಿಯಿಂದಿರುವನು” ಆದುದರಿಂದ ನೀವೆಲ್ಲರೂ “ಧೀರ್ಘ ಶಾಂತಿಯಿಂದಿರಿ” ಇಲ್ಲಿ ಯಾಕೋಬನು ಗ್ರೀಕ್ ಭಾಷೆಯ ಸಂಬಂಧವುಳ್ಳ ಎರಡು ಪದಗಳನ್ನು ಉಪಯೋಗಿಸಿದ್ದಾನೆ ಮೊದಲ ಪದದರ್ಥ “ದೂರ ಅತಿ ದೂರ, ಉದ್ದವಾದ” ಎಂಬುದಾಗಿ ಮತ್ತು ಎರಡನೆಯ ಪದಾದರ್ಥ “ಮನೋವಿಕಾರ ತಾಪ ರೋಷ, ಕೋಪ” ಈ ಎರಡು ಪದಗಳು ಒಟ್ಟಾಗಿ “ಧೀರ್ಘಶಾಂತಿ” ಎಂಬ ಆಲೋಚನೆಯನ್ನು ನೀಡುತ್ತದೆ.

ಯಾಕೋಬನ ದಿವಸಗಳಲ್ಲಿ ಇದ್ದಂತ ಕ್ರೈಸ್ತರಲ್ಲಿ ಈ ಸಂಗತಿಯನ್ನು ಅವರು ಹೊಂದಿರಲಿಲ್ಲವೆಂಬ ಸಂದೇಹವಿದೆ. ಬಹುಶಃ ಇಂತಹ ನೋವುಗಳ ಅನುಭವ ನಮಗುಂಟಾಗಿದ್ದರೆ, ನಮ್ಮಲ್ಲಿರುವ ಅನೇಕರು ಸಹ ಇದೆ ವಿಧವಾದ ವೇದನೆಯನ್ನು ಅನುಭವಿಸಿದ್ದಾರೆ. ಒಬ್ಬ ಮನುಷ್ಯನು ಪ್ರಾರ್ಥಿಸಿದಂತೆ “ಓ ದೇವರೆ, ನನಗೆ ಧೀರ್ಘ ಶಾಂತಿಯನ್ನು ಕೊಡು, ಮತ್ತು ಈ ತಕ್ಷಣವೇ ಅದನ್ನು ನೀಡು!” ಎಂಬ ಈ ಪ್ರಾರ್ಥನೆಯು ಅನೇಕ ಕ್ರೈಸ್ತರದ್ದು ಆಗಿದೆ. ವಿಶೇಷವಾಗಿ ನಮ್ಮನ್ನು ನಿಂದಿಸುವವರ ಮತ್ತು ನಮ್ಮ ಬಗ್ಗೆ ಇಲ್ಲ ಸಲ್ಲದ ಮಾತುಗಳನ್ನಾಡುವ ಜನರ ಕುರಿತು ಇದು ಸತ್ಯವಾಗಿದೆ. ಈ ಹಳೆಯ ಹೇಳಿಕೆಯನ್ನು ನೆನಪಿಸಿಕೊಳ್ಳಿರಿ. “ಹುಚ್ಚನಾಗಬೇಡ, ಅತಿಯಾಗಿಯೂ ಬೇಡ” ಇದರ ಕುರಿತು ಹುಚ್ಚರಾಗುತ್ತೇವೆ ಮತ್ತು ಅದರಲ್ಲಿ ಅತಿಯಾಗಿ ಮಾಡುತ್ತೇವೆ. ನಮ್ಮ ಆಲೋಚನೆಗಳು ಸರಿಯಾದ ಪರಿಸ್ಥಿತಿಗೆ ಬರುವವರೆಗೂ ಪ್ರಪಂಚವು ಸ್ತಬ್ಧವಾಗಿರುತ್ತದೆ. ಈ ವಿಧವಾದ ಆಲೋಚನೆಗಳನ್ನು ಮತ್ತು ಕ್ರಿಯೆಗಳನ್ನು ಸಭೆಗಳಿಂದ ತೆಗೆದುಹಾಕಬೇಕೆಂದು ಯಾಕೋಬನು ತಿಳಿಸುತ್ತಿದ್ದಾನೆ.

ಒಬ್ಬ ರೈತನು ಮುಂಗಾರಿಗೂ ಮತ್ತು ಹಿಂಗಾರು ಮಳೆಗಳು ಬರುವತನಕ ದೀರ್ಘ ಶಾಂತಿಯಿಂದಿರುವ ದೃಷ್ಟಾಂತದ ಮೂಲಕ ನಮ್ಮನ್ನು ಉತ್ತೇಜಿಸುತ್ತಾನೆ. 5 1/2 ವರ್ಷಗಳ ಕಾಲ ನಾನು ಪಶ್ಚಿಮ ಟೆಕ್ಸಸ್‌ನಲ್ಲಿ ಸೇವಕನಾಗಿದ್ದೆ, ಅಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದ ರೈತರ ತಾಳ್ಮೆಯನ್ನು ಗಮನಿಸಿದ್ದೇನೆ. ಬೀಜವನ್ನು ಬಿತ್ತುವದಕ್ಕೆ ಮುಂಗಾರು ಮಳೆಯನ್ನು ಅದರ ಬೆಳವಣಿಗೆಗೆ ಹಿಂಗಾರು ಎಳೆಯನ್ನು ಅವರು ಬಯಸುತ್ತಾರೆ. ಅನೇಕ ಸಾರಿ ಹೆಚ್ಚಾದ ಮುಂಗಾರು ಮಳೆಯು ಬೀಜವನ್ನು ಬಿತ್ತುವದಕ್ಕೆ ಅಪಾಯವನ್ನುಂಟು ಮಾಡುತ್ತದೆ. ಅಥವಾ ತಡವಾಗಿ ಬರುವ ಮಳೆಯು ಉತ್ತಮವಾದ ಸುಗ್ಗಿಗೆ ಅಪಾಯ ವಾಗಿದೆ ಒಂದು ವೇಳೆ ರೈತರಿಗೆ ತಾಳ್ಮೆಯಿಲ್ಲದೆ ಹೋದರೆ (ಮತ್ತು ನಂಬಿಕೆ), ಅವರು ಬದುಕುವದು ಅಸಾಧ್ಯ.

ಕರ್ತನಾದ ಯೇಸು ಕ್ರಿಸ್ತನು ಬರುವವರೆಗೆ ನಾವು ದೀರ್ಘಶಾಂತಿಯಿಂದಿರ ಬೇಕೆಂದು ಯಾಕೋಬನು ತಿಳಿಸುತ್ತಾನೆ. “ಕರ್ತನ ಬರೋಣದ” ಹಿನ್ನೆಲೆಯ ಮುಖ್ಯ ಪ್ರಸ್ತಾಪವೇನೆಂದರೆ ಯೇಸುವಿನ “ಬರೋಣದ” ಕುರಿತಾಗಿರುತ್ತದೆ. ರೋಮನ್ನರ ಪ್ರದೇಶ ದಲ್ಲಿ ಆ ಸರ್ಕಾರದ ಅಧಿಕಾರಿಗಳು ಆಗಾಗ್ಗೆ ಆ ಪಟ್ಟವನ್ನು ಸಂಧಿಸುತ್ತಿದ್ದರು. ಹಣದ ಕುರಿತಾಗಿ ಉಂಟಾಗಿದ್ದ ತೊಂದರೆಗಳನ್ನು ಅವರ ಮುಂದೆ ಇಡಲಾಗುತ್ತಿತ್ತು, ಆ ಸಮಯದಲ್ಲಿ ಎಲ್ಲಾ ತಪ್ಪುಗಳನ್ನು ಸರಿಪಡಿಸಲಾಗಿತ್ತು. ಅದನ್ನು ಅವರು *ಪೌರೌಶೀಯಾ* ಎಂದು ಕರೆಯುತ್ತಿದ್ದರು. ಯೇಸು ಕ್ರಿಸ್ತನು ಹಿಂತಿರುವಾಗುವಾಗ ಆತ್ಮಿಕವಾದಂತ ಎಲ್ಲಾ ತಪ್ಪುಗಳನ್ನು ಸರಿಪಡಿಸಲಾಗುತ್ತದೆ (2 ಥೆಸಲೋನಿಕ 1:6, 7). ಹಿಂಸೆಗೆ ಒಳಗಾದ ಕ್ರೈಸ್ತನು ಈ ಸಂಗತಿಯು ನೆರವೇರುವವರೆಗೆ “ಧೀರ್ಘಶಾಂತನಾಗಿರಬೇಕು.”

## “ದೃಢವಾಗಿರಿ” (5:8)

ವಚನ 8ರಲ್ಲಿ ಎರಡನೆಯ ಆಜ್ಞೆಯನ್ನು ನೋಡುತ್ತೇವೆ. ಸಹೋದರರು ಹೃದಯಗಳನ್ನು

"ದೃಢಪಡಿಸಿಕೊಳ್ಳಬೇಕು" ಎಂದು ತಿಳಿಸಲಾಗಿದೆ (NIV) ವಿಷಯಗಳು ಕೆಡುವಾಗ ನಾವು ಅಧೈರ್ಯಗೊಳ್ಳುತ್ತೇವೆ. ನಮ್ಮ ಸುತ್ತಲೂ ಜರುಗುವ ಸಂಗತಿಗಳನ್ನು ನಮ್ಮ ನಂಬಿಕೆಯು ಅವಲಂಬಿಸಿರುತ್ತದೆ, ಜನರು ನಮ್ಮ ಕುರಿತಾಗಿ ಏನು ಹೇಳುವರು ಅಥವಾ ಜನರು ನಮ್ಮನ್ನು ನಡಿಸಿಕೊಳ್ಳುವ ವಿಷಯದಲ್ಲಿ ಅವಲಂಭಿತವಾಗಿರುತ್ತದೆ. ನಾವು ತಾರತಮ್ಯಕ್ಕೆ ಒಳಗಾಗುವಾಗ ನಮ್ಮ ಬಲದಲ್ಲಿ ಕುಗ್ಗುತ್ತೇವೆ. ಯಾಕೋಬನು ಹೇಳುವದೇನೆಂದರೆ ನಂಬಿಕೆಯು ಯಾವ ವ್ಯತ್ಯಾಸವನ್ನೂಂಟು ಮಾಡುವದಿಲ್ಲ. "ದೃಢವಾಗಿ ನಿಲ್ಲಿರಿ" ಎಂಬುದರ ಅಕ್ಷರಶಃ ಅರ್ಥವೇನೆಂದರೇ "ನಿಮ್ಮ ಹೃದಯಗಳನ್ನು ಬಲಪಡಿಸಿಕೊಳ್ಳಿರಿ" ನಂಬಿಕೆಯು ನಮ್ಮ ಹೃದಯಗಳನ್ನು ಬಲಪಡಿಸುವಾಗ ನಮಗುಂಟಾದ ತಾರತಮ್ಯವನ್ನು ಸಹಿಸಿಕೊಳ್ಳುತ್ತೇವೆ.

ನಾವು ದೃಢವಾಗಿ ನಿಲ್ಲಲು ಆಧಾರವಾಗಿ ಯಾಕೋಬನು ಈ "ಒಂದು ಯೋಗ್ಯವಾದ" ಹೇಳಿಕೆಯನ್ನು ನೀಡಿರುವನು, "... ಕರ್ತನ ಬರೋಣವು ಸಮೀಪವಾಯಿತ್ತು ಎಂದು ಹೊಸ ಒಡಂಬಡಿಕೆಯಲ್ಲಿ ನಾವು ನೋಡುವಾಗ," ನಾವು ನಮ್ಮ ಬುಜವನ್ನು ತಟ್ಟಿಕೊಂಡು ಕರ್ತನ ಬರೋಣದ ಸಮಯದ ಸೂಚನೆ ಇದೆ ಎಂದು ತಿಳಿಯುತ್ತೇವೆ, "ಹೊಸ ಒಡಂಬಡಿಕೆಯ ಕ್ರೈಸ್ತರು, ಕರ್ತನು ಯಾವುದೇ ಗಳಿಗೆಯಲ್ಲಿ ಬರಬಹುದು ಎಂದು ಅರಿತವರಾಗಿ ಜೀವಿಸಬೇಕಿತ್ತು." ಈ ದಿನದ ಕ್ರೈಸ್ತರು ಸಹ ಅದೇ ವಿಧದಲ್ಲಿ ಜೀವಿಸಬೇಕು. ಯೇಸು ಯಾವುದೇ ಸಮಯದಲ್ಲಿ ಬರಬಹುದು ಎಂದು, ತಿಳಿದು ಜೀವಿಸುವಾಗ ಸಂಕಟದ ಸಮಯದಲ್ಲಿ ಅಧೈರ್ಯಗೊಳ್ಳುವದಿಲ್ಲ.

## "ಗುಣಗುಟ್ಟಬೇಡಿರಿ" (5:9)

ಮೂರನೆಯ ಆಜ್ಞೆಯಲ್ಲಿ ನಕಾರಾತ್ಮಕವಾದ ಮೊದಲನೆಯ ವಿಷಯವನ್ನು ವಚನ 9ರಲ್ಲಿ ನೋಡುತ್ತೇವೆ: "ಸಹೋದರರೇ ನೀವು ಒಬ್ಬರ ಮೇಲೊಬ್ಬರು ಗುಣಗುಟ್ಟಬೇಡಿರಿ; ..." ಎಂಬುದಾಗಿ ಯಾಕೋಬನು ತಿಳಿಸುತ್ತಾ ಕ್ರೈಸ್ತರಿಗೆ ಹಿಂಸೆಯುಂಟಾಗುವಾಗಲೂ ಸುತ್ತಲಿನವರಿಂದ ತಾರತಮ್ಯಗಳುಂಟಾಗುವಾಗಲೂ ಗುಣುಗುಟ್ಟುವುದು ಸಹಜವಾಗಿರುತ್ತದೆ! ನಮ್ಮ ಸುತ್ತಲಿನವರಿಗೆ ನಮ್ಮ ನೋವಿನ ಸ್ವರ ಕೇಳಿಸುತ್ತದೆ ಸುತ್ತಲಿನವರಿಂದ ಉಂಟಾಗುವಂತ ತಾರತಮ್ಯಕ್ಕೆ ವಿರುದ್ಧವಾಗಿ ಗುಣಗುಟ್ಟುವಿಕೆಯುಂಟಾಗುತ್ತದೆ.

ಗುಣಗುಟ್ಟುವವರನ್ನು, ದೂರು ಹೇಳುವವರನ್ನು ಸಭೆಯ ಸದಸ್ಯರುಗಳು ಕ್ಷಮಿಸುವದು ಕಷ್ಟಕರವಾಗಿರುತ್ತದೆ. ನಾವುಗಳು ಬಲಹೀನವಾದ ಪ್ರತಿಕ್ರಿಯೆಯನ್ನು ನೀಡಿ "ಅವನಿರುವದೇ ಈ ಸ್ಥಿತಿಯಲ್ಲಿ" ಅಥವಾ, "ಅವನ ವ್ಯಕ್ತಿತ್ವವೇ ನಕರಾತ್ಮಕವಾದದ್ದು" ಎಂದೇಳುತ್ತೇವೆ. ಗುಣಗುಟ್ಟುವವರನ್ನು ನಾವು ಅಲಕ್ಷಮಾಡಿ ಅವನಿಗೆ ಪರಿಹಾರ ನೀಡುವ ವಿಷಯದಲ್ಲಿ ಮುತುವರ್ಜಿ ವಹಿಸುವದಿಲ್ಲ. ನಾವು ತಾರತಮ್ಯಕ್ಕೆ ಒಳಗಾದರೂ ನಿಮ್ಮ ನಂಬಿಕೆಯು ನಿಮ್ಮ ಸಹೋದರನಿಗೆ ವಿರುದ್ಧವಾಗಿ ಗುಣಗುಟ್ಟದಂತೆ ಮಾಡುತ್ತದೆ ಎಂದು ದೇವರು ತಿಳಿಸುತ್ತಾನೆ. ಈ ಕೆಟ್ಟ ವಿಷಯವನ್ನು ಗಂಭೀರವಾಗಿ ಪರಿಗಣಿಸುವಂತೆ ನಾವು ಸಹ ಪರಿಗಣಿಸಬೇಕು, ಪಾಪದಿಂದ ಮಾತನಾಡುವ ಸದಸ್ಯನ ನಿಮಿತ್ತ ಸಭೆಯು ನಾಶನಕ್ಕೆ ಮುಂದಾಗುತ್ತದೆ.

ಗುಣಗುಟ್ಟಬಾರದೆಂಬ ವಿಷಯವು ಪ್ರಾಮುಖ್ಯವಾದದ್ದೆಂದು ಯಾಕೋಬನ ಮೂಲಕ ಪರಿಶುದ್ಧಾತ್ಮನು ಎಚ್ಚರಿಕೆಯನ್ನು ನೀಡಿ, ಇಂಥವರನ್ನು ದೇವರು ತೀರ್ಪುಗೊಳಮಾಡುತ್ತಾನೆಂದು ತಿಳಿಸಿದ್ದಾನೆ. ಗುಣಗುಟ್ಟುವವರನ್ನು ತೀರ್ಪು ಮಾಡುವದು ಸಹಜವಾದ ಪ್ರವೃತ್ತಿ ಯಾಕಂದರೆ "ನ್ಯಾಯಾಧಿಪತಿಯು ಭಾಗಲಿನ ಹತ್ತಿರದಲ್ಲೆ ನಿಂತಿದ್ದಾನೆ." ಗುಣಗುಟ್ಟುವಿಕೆಯ ನಿಮಿತ್ತ ಉಂಟಾಗುವ ಯೇಸುವಿನ ನ್ಯಾಯತೀರ್ಪು ಭಯಂಕರವಾದದ್ದು.

## “ಆಣೆಯಿಡಬೇಡಿರಿ” (5:12)

ನಮ್ಮ ದೈನಂದಿನ ನಡವಳಿಕೆಯಲ್ಲಿ, ನಂಬಿಕೆಯು ವ್ಯತ್ಯಾಸಗಳನ್ನುಂಟು ಮಾಡಬೇಕು. ನಾವು ಆಣೆಯಿಡಬಾರದೆಂದು ಅವನು ತಿಳಿಸುತ್ತಾನೆ (5:12). ನಮ್ಮ ನಾಲಿಗೆಯು ಮಿತಿಮೀರಿ ಮಾತನಾಡುವಾಗ ಇತರರು ಅದರಿಂದ ತಪ್ಪಾದ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೆ. ಜನರ ಮಧ್ಯದಲ್ಲಿ ಜೀವಿಸುವ ಮೂಲಕ ನಮ್ಮ ಪ್ರಪಂಚವು ಎಷ್ಟು ಕೆಟ್ಟದ್ದಾಗಿದೆಯೆಂದು ಅರಿತುಕೊಳ್ಳುತ್ತೇವೆ. ಇಂಥ ಕೆಟ್ಟ ಸಂದರ್ಭಗಳಲ್ಲಿ, ನಮ್ಮ ನಾಲಿಗೆಯನ್ನು ಹತೋಟಿಗೆ ತರುವ ಮೂಲಕ ನಮ್ಮ ನಂಬಿಕೆಯಿಂದ ಉಂಟಾಗುವ ವ್ಯತ್ಯಾಸವನ್ನು ತೋರ್ಪಡಿಸಿಕೊಳ್ಳುತ್ತೇವೆ.

ಇಂಥ ಒಂದು ಕೆಟ್ಟತನವು, ಸಮಾಜದಲ್ಲಿ ಕ್ರೈಸ್ತರಿಗೆ ಒಂದು ವಿಧದ ಉರುಲಾಗಿರುತ್ತದೆ. ನಮ್ಮ ಮಾತುಗಳು ಸರಳವಾಗಿಯೂ, ನೇರವಾಗಿಯೂ ಇರಬೇಕೆಂದು ಮತ್ತು ಲೌಕಿಕವಾಗಿರಬಾರದೆಂದು ಯಾಕೋಬನು ಪ್ರಬೋಧಿಸುತ್ತಾನೆ. ಕ್ರೈಸ್ತರ ಭಾಷೆಯು ಅವರ ಜೀವಿತಕ್ಕೆ ಹೊಂದಾಣಿಕೆಯಿಲ್ಲದಿರುವಂತದ್ದು ಅಘಾತವೇ. ಕಷ್ಟಗಳು ಸಂಭವಿಸುವಾಗ, ನಮ್ಮ ಮಾತುಗಳಲ್ಲಿ ನಂಬಿಕೆಯಿಂದುಟಾಗುವ ವ್ಯತ್ಯಾಸಗಳನ್ನು ಕಾಣಬೇಕು.

## ಮುಕ್ತಾಯ

ನಾವು ಕರ್ತನಿಂದ ಕರೆಯಲ್ಪಟ್ಟಾಗ, ಹೂವಿನ ಹಾಸಿಗೆಯನ್ನು ಆತನು ನಮಗೆ ವಾಗ್ದಾನ ಮಾಡಿರುವದಿಲ್ಲ. ಕ್ರೈಸ್ತ ಜೀವಿತವು ಕಷ್ಟ ಕರವೇ ನಮ್ಮನ್ನು ಯಾರು ಸರಿಯಾದ ರೀತಿಯಲ್ಲಿ ನಡಿಸಿಕೊಳ್ಳಬೇಕು ಅಂತವರೇ ನಮಗೆ ತೊಂದರೆ ನೀಡುವಾಗ ಅದು ಸಹ ಕಷ್ಟಕರವೇ. ನಮ್ಮನ್ನು ಪ್ರೀತಿಸುವವರಿಂದಲೇ ನಾವು ನಿಂದನೆಗೆ ಒಳಗಾಗುವಾಗ, ನಾವುಗಳು ನೆನಪಿಡಬೇಕಾದ ಸಂಗತಿಗಳೆನೆಂದರೆ (1) ಧೀರ್ಘಶಾಂತರಾಗಿರಬೇಕು, (2) ದೃಢವಾಗಿರಬೇಕು, (3) ಗುಣಗುಟ್ಟಬಾರದು, ಮತ್ತು (4) ಆಣೆಯಿಡಬಾರದು.

ನಮಗೆ ನೀಡಲಾಗಿರುವ ಭರವಸೆಯಲ್ಲಿರುವ ಆಜ್ಞೆಯೇನೆಂದರೆ, ಬಾಧೆಗಳ ಸಮಯದಲ್ಲಿ ತಾಳ್ಮೆಯಿಂದ ಇದ್ದವರ ಮಾದರಿಯನ್ನು ನಮ್ಮ ಮುಂದಿಡಲಾಗಿದೆ. ಮೊದಲನೆಯದಾಗಿ ಪ್ರವಾದಿಗಳಾದ ಎಲೀಯ, ಯೆಶಾಯ, ಯೆರಮೀಯ, ಯೆಹೆಜ್ಕೇಲ, ದಾನಿಯೇಲನು ಮತ್ತು ಹೋಶೆಯ ತಮ್ಮ ಕಷ್ಟದ ಕಾಲದಲ್ಲಿ ತಾಳ್ಮೆಯಿಂದಿದ್ದ ಚಿತ್ರಣವನ್ನು ಗಮನಿಸಿರಿ. ಯೋಬನ ದೀರ್ಘತಾಳ್ಮೆಯನ್ನು ಗಮನಿಸಿರಿ. NIVಯಲ್ಲಿ ಉತ್ತಮವಾದ ಅವಿರತದ ಯತ್ನದ ಕುರಿತಾಗಿ ಒಳ್ಳೆಯ ತರ್ಜುಮೆಯನ್ನು ಮಾಡಲಾಗಿದೆ, ಅದು “ತಾಳ್ಮೆಯೇ” ಯಾಕಂದರೆ ಯೋಬನು ಕಷ್ಟದ ಸಮಯದಲ್ಲಿ ತಾಳ್ಮೆಯನ್ನೆ ಪ್ರದರ್ಶಿಸಿದನು. ಸಂಕಷ್ಟಗಳ ಮಧ್ಯದಲ್ಲಿ ಯೋಬನು ಶಾಂತಮನಸ್ಸುಳ್ಳವನಾಗಿದ್ದನು. ಈ ಮಾದರಿಯು ನಮ್ಮ ನೀರೀಕ್ಷೆಗೆ ಸಹಾಯವಾಗುವಂತ ಮಾದರಿಯಾಗಿರುತ್ತದೆ.

ಕಷ್ಟಕಾಲದಲ್ಲಿ ದೇವರು ನಮಗೆ ನಂಬಿಕೆಯಿಂದುಂಟಾಗುವ ಬಲವನ್ನು ನೀಡಲಿ.